# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | : ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : 63 |
| ಉತ್ತರಿಸಬೇಕಾದ ದಿನಾಂಕ | : 29.01.2021. |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದ ಹೈನುಗಾರಿಕೆಗೆ ಕೇಂದ್ರ ಸರ್ಕಾರವು ನೆರವು ನೀಡುತ್ತಿದೆಯೇ; | ಹೌದು |
| ಆ | ಕೇಂದ್ರದಿಂದ ಬಿಡುಗಡೆಯಾದ ಹಣವೆಷ್ಟು; ವಿನಿಯೋಗಿಸಿದ ಮೊತ್ತವೆಷ್ಟು; | (see table below) |
| ಇ | ಪಶು ಇಲಾಖೆಯು ಸಿಬ್ಬಂದಿಗಳ ಕೊರತೆಯನ್ನು ಎದುರಿಸುತ್ತಿದೆಯೇ; | ಹೌದು |
| ಈ | ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು? | ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಅನುಬಂಧ ದಲ್ಲಿ ಲಗತ್ತಿಸಿದೆ<br>ಪ್ರಸ್ತುತ ಇಲಾಖೆಯಲ್ಲಿ ಖಾಲಿ ಇರುವ 639 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳ ಮುಖಾಂತರ ಭರ್ತಿ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದ್ದು ಆರ್ಥಿಕ ಇಲಾಖೆಯು ಆರ್ಥಿಕ ನಿರ್ಬಂಧಗಳ ಹಿನ್ನಲೆಯಲ್ಲಿ ಸಹಮತಿ ನೀಡಿರುವುದಿಲ್ಲ. ಮುಂದುವರೆದು, 371(J) ರಡಿ ಕಲ್ಯಾಣ ಕರ್ನಾಟಕದ ಭಾಗದಲ್ಲಿ 61 ಪಶುವೈದ್ಯಾಧಿಕಾರಿ ಹುದ್ದೆಗಳನ್ನು, 32 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಹಾಗೂ 83 ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ, ಅಧಿಸೂಚನೆ ಹೊರಡಿಸಲಾಗಿರುತ್ತದೆ. ಆದರೆ, ಆರ್ಥಿಕ ಇಲಾಖೆಯು ದಿನಾಂಕ;06.07.2020 ರ ಸುತ್ತೋಲೆಯಲ್ಲಿ ಆರ್ಥಿಕ ನಿರ್ಬಂಧಗಳ |

Answer to ಆ:

| ವರ್ಷ | ಬಿಡುಗಡೆಯಾದ ಮೊತ್ತ (ರೂ. ಕೋಟಿಗಳಲ್ಲಿ) | ವಿನಿಯೋಗಿಸಲಾದ ಮೊತ್ತ (ರೂ. ಕೋಟಿಗಳಲ್ಲಿ) | ಷರಾ |
|---|---|---|---|
| 2018-19 | 20.22 | 20.21 | - |
| 2019-20 | 22.45 | - | ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. |
| 2020-21 | 23.3 | - | ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. |
| ಒಟ್ಟು ಮೊತ್ತ | 65.97 | 20.21 | - |

| | | |
|---|---|---|
| | | ಹಿನ್ನೆಲೆಯಲ್ಲಿ 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಹುದ್ದೆಗಳು ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಸೇರಿದಂತೆ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯುವಂತೆ ತಿಳಿಸಿರುತ್ತದೆ. ಆದುದರಿಂದ ಸದರಿ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುತ್ತದೆ.<br>ಇಲಾಖೆಯಲ್ಲಿ ಖಾಲಿ ಇರುವ ಮುಂಬಡ್ತಿ ಹುದ್ದೆಗಳನ್ನು ಮುಂಬಡ್ತಿ ಮುಖಾಂತರ ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದ್ದು ಇದರಲ್ಲಿ ಕೆಲವು ವೃಂದಗಳಾದ ಜಾನುವಾರು ಅಭಿವೃದ್ಧಿ ಅಧಿಕಾರಿ 05 ಹುದ್ದೆಗಳಿಗೆ, ಜಾನುವಾರು ಅಧಿಕಾರಿ 03 ಹುದ್ದೆಗಳಿಗೆ, ಹಿರಿಯ ಪಶುವೈದ್ಯಕೀಯ ಪರೀಕ್ಷಕರ 06 ಹುದ್ದೆಗಳಿಗೆ, ಪಶು ವೈದ್ಯಕೀಯ ಪರೀಕ್ಷಕರ 15 ಹುದ್ದೆಗಳಿಗೆ ಮುಂಬಡ್ತಿ ಮುಖೇನ ಭರ್ತಿ ಮಾಡಲಾಗಿದ್ದು, ಸದರಿ ಮುಂಬಡ್ತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಗೆ ಪ್ರಕರಣ ಬಾಕಿಯಿರುತ್ತದೆ. ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಗೊಂಡ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.<br>'ಡಿ' ದರ್ಜೆ ನೌಕರರ ಹುದ್ದೆಗಳು, ಡಾಟಾ ಎಂಟ್ರಿ ಆಪರೇಟರ್ ಮತ್ತು ವಾಹನ ಚಾಲಕರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲಾಗುತ್ತಿದೆ.<br>ನೇರ ನೇಮಕಾತಿಯ ಹುದ್ದೆಗಳಿಗೆ ಕೋವಿಡ್-19 ಹಿನ್ನೆಲೆಯಲ್ಲಿ ಆರ್ಥಿಕ ಮಿತವ್ಯಯದ ಉದ್ದೇಶದಿಂದ ಆರ್ಥಿಕ ಇಲಾಖೆಯು ನೇಮಕಾತಿಗಳನ್ನು ತಡೆಹಿಡಿದ ಕಾರಣ ನೇಮಕಾತಿ ಪ್ರಕ್ರಿಯೆಯು ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತದೆ. ಆರ್ಥಿಕ ಇಲಾಖೆಯಿಂದ ಸಹಮತಿ ದೊರೆತ ತಕ್ಷಣ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲಾಗುವುದು. |

**ಪಸಂಮೀ ಇ-13 ಸಲೆವಿ 2021**

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು

# ಅನುಬಂಧ-1

## ಪಶುಪಾಲನಾ ಮತ್ತು ಪಶುವೈದ್ಯಸೇವಾ ಇಲಾಖೆಯಲ್ಲಿನ ಸಿಬ್ಬಂದಿ ವಿವರ.

| ಕ್ರ.ಸಂ. | ಪದನಾಮ | ಮಂಜೂರು | ಭರ್ತಿ | ಖಾಲಿ | |
|---|---|---|---|---|---|
| | **ಎ-ಗುಂಪು** | | | | |
| 1 | ಆಯುಕ್ತರು | 1 | 1 | 0 | |
| 2 | ನಿರ್ದೇಶಕರು | 1 | 0 | 1 | |
| 3 | ಅಪರ ನಿರ್ದೇಶಕರು | 5 | 4 | 1 | |
| 4 | ಜಂಟಿ ನಿರ್ದೇಶಕರು | 9 | 8 | 1 | |
| 5 | ಜಂಟಿ ನಿರ್ದೇಶಕರು(ಆಡಳಿತ) | 1 | 0 | 1 | |
| 6 | ಜಂಟಿ ನಿರ್ದೇಶಕರು(ಅಂಕಿ-ಅಂಶ) | 1 | 0 | 1 | |
| 7 | ಉಪ ನಿಯಂತ್ರಕರು(ಹಣಕಾಸು) | 1 | 0 | 1 | |
| 8 | ಉಪ ನಿರ್ದೇಶಕರು(ಅಂಕಿ-ಅಂಶ) | 2 | 1 | 1 | |
| 9 | ಉಪ ನಿರ್ದೇಶಕರು | 60 | 49 | 11 | |
| 10 | ಉಪ ನಿರ್ದೇಶಕರು (ಪಾಲಿಕ್ಲಿನಿಕ್) | 30 | 26 | 4 | |
| 11 | ಸಹಾಯಕ ನಿರ್ದೇಶಕರು | 176 | 120 | 56 | |
| 12 | ಮುಖ್ಯ ಪಶುವೈದ್ಯಾಧಿಕಾರಿ | 509 | 758 | 0 | (ಹೆಚ್ಚುವರಿ:249) ** ಹೊಂದಿ ಕೊಳ್ಳುವ |
| 13 | ಮುಖ್ಯ ಪಶುವೈದ್ಯಾಧಿಕಾರಿ (ವಿಷಯ ತಜ್ಞರು) | 30 | 18 | 12 | |
| 14 | ಹಿರಿಯ ಪಶುವೈದ್ಯಾಧಿಕಾರಿ | 970 | 582 | 388 | * |
| 15 | ಹಿರಿಯ ಪಶುವೈದ್ಯಾಧಿಕಾರಿ (ವಿಷಯ ತಜ್ಞರು) | 30 | 21 | 9 | * |
| 16 | ಪಶುವೈದ್ಯಾಧಿಕಾರಿ | 1572 | 933 | 639 | |
| 17 | ಪಶುವೈದ್ಯಾಧಿಕಾರಿ (ವಿಷಯ ತಜ್ಞರು) | 30 | 30 | 0 | |
| 18 | ಕೇಂದ್ರ ಸ್ಥಾನಿಕ ಸಹಾಯಕರು (ಎ-ಗುಂಪು) | 1 | 1 | 0 | |
| 19 | ಸಹಾಯಕ ನಿರ್ದೇಶಕರು(ಕೃಷಿ) | 1 | 0 | 1 | |
| | **ಒಟ್ಟು=** | 3430 | 2552 | 1127 | |
| | **ಬಿ-ಗುಂಪು** | | | | |
| 20 | ಸಹಾಯಕ ನಿರ್ದೇಶಕರು(ಸಾಂಖ್ಯಿಕ)/ ಫೀಲ್ಡ್ ಆಫೀಸರ್(ಸಾಂಖ್ಯಿಕ) | 9 | 4 | 5 | |
| 21 | ಜಾನುವಾರು ಅಭಿವೃದ್ಧಿ ಅಧಿಕಾರಿ | 227 | 164 | 63 | |
| 22 | ಸಹಾಯಕ ಆಡಳಿತಾಧಿಕಾರಿಗಳು | 35 | 29 | 6 | |
| 23 | ಕೃಷಿ ಅಧಿಕಾರಿ | 1 | 0 | 1 | |
| | **ಒಟ್ಟು=** | 272 | 197 | 75 | |

| | | | | | |
|---|---|---|---|---|---|
| **ಸಿ-ಗುಂಪು** | | | | | |
| 24 | ಜಾನುವಾರು ಅಧಿಕಾರಿ | 500 | 415 | 85 | |
| 25 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 1825 | 1481 | 344 | |
| 26 | ಪಶುವೈದ್ಯಕೀಯ ಪರೀಕ್ಷಕರು | 1847 | 1330 | 517 | |
| 27 | ಪಶುವೈದ್ಯಕೀಯ ಸಹಾಯಕರು | 2144 | 1236 | 908 | |
| 28 | ಲ್ಯಾಬ್ ಟೆಕ್ನೀಷಿಯನ್ | 30 | 0 | 30 | |
| 29 | ಎಕ್ಸ್‌ರೇ ಟೆಕ್ನೀಷಿಯನ್ | 1 | 0 | 1 | |
| | **ಒಟ್ಟು=** | 6347 | 4462 | 1885 | |
| **ಆಡಳಿತ ವರ್ಗ** | | | | | |
| 30 | ಆಡಿಟ್ ಅಧೀಕ್ಷಕರು | 1 | 1 | 0 | |
| 31 | ಅಧೀಕ್ಷಕರು | 99 | 96 | 3 | |
| 32 | ಪ್ರಥಮ ದರ್ಜೆ ಸಹಾಯಕರು | 209 | 208 | 1 | |
| 33 | ದ್ವಿತೀಯ ದರ್ಜೆ ಸಹಾಯಕರು | 294 | 285 | 9 | |
| 34 | ಶೀಘ್ರಲಿಪಿಗಾರರು | 24 | 22 | 2 | |
| 35 | ಹಿರಿಯ ಬೆರಳಚ್ಚುಗಾರರು | 20 | 9 | 11 | |
| 36 | ಬೆರಳಚ್ಚುಗಾರರು | 88 | 37 | 51 | |
| 37 | ಹಿರಿಯ ವಾಹನಚಾಲಕರು | 59 | 12 | 47 | |
| 38 | ವಾಹನಚಾಲಕರು | 237 | 82 | 155 | |
| 39 | ಕಿರಿಯ ಸಾಂಖ್ಯಿಕ ಅಧಿಕಾರಿ (ಸಾಂಖ್ಯಿಕ ಪರೀಕ್ಷಕರು) | 6 | 1 | 5 | |
| 40 | ಸಹಾಯಕ ಸಾಂಖ್ಯಿಕ ಅಧಿಕಾರಿ | 17 | 13 | 4 | |
| | **ಒಟ್ಟು=** | 1054 | 766 | 288 | |
| **ಡಿ-ಗುಂಪು** | | | | | |
| 41 | ಜಮೇದಾರ್ | 42 | 0 | 42 | |
| 42 | ಕುಕ್-ಗೆಸ್ಟ್ ಹೌಸ್ ಕೇರ್ ಟೇಕರ್ | 13 | 0 | 13 | |
| 43 | ವೆಟರಿನರಿ ಅಟೆಂಡೆಂಟ್ / ಗ್ರೂಪ್ ಡಿ | 7363 | 2130 | 5233 | |
| | **ಒಟ್ಟು=** | 7418 | 2130 | 5288 | |

| | | | | | |
|---|---|---|---|---|---|
| **ಇತರೆ ವೃಂದಗಳು** | | | | | |
| 44 | ಸಹಾಯಕ ಅಭಿಯಂತರರು | 1 | 0 | 1 | |
| 45 | ಸಹಾಯಕ ಕೃಷಿ ಅಧಿಕಾರಿ | 7 | 0 | 7 | |
| 46 | ಕೃಷಿ ಸಹಾಯಕರು /ಕ್ಷೇತ್ರ ಸಹಾಯಕರು | 22 | 0 | 22 | |
| 47 | ಕ್ಷೀರ ಮೇಲ್ವಿಚಾರಕರು / ವ್ಯವಸ್ಥಾಪಕರು(ಕ್ಷೀರ) | 1 | 0 | 1 | |
| 48 | ಪ್ರಚಾರ ಸಹಾಯಕರು | 1 | 0 | 1 | |
| 49 | ಮೆಕಾನಿಕ್ (ಹಿರಿಯ ಶ್ರೇಣಿ) | 2 | 0 | 2 | |

| | | | | | |
|---|---|---|---|---|---|
| 50 | ಹಿರಿಯ ಮೆಕಾನಿಕ್ | 2 | 0 | 2 | |
| 51 | ಮೆಕ್ಯಾನಿಕ್ (ಕಿರಿಯ ಶ್ರೇಣಿ) | 5 | 0 | 5 | |
| 52 | ಸಹಾಯಕ ಫಿಟ್ಟರ್ಸ್ | 1 | 0 | 1 | |
| | ಒಟ್ಟು= | 41 | 0 | 41 | |